ದಿನಾಂಕ: 05.11.2022ರಂದು ಬೆಳಿಗ್ಗೆ 10.30 ಗಂಟೆಗೆ ಶಿವನಗರ ವಾರ್ಡ್ ನಂ.143 [107] ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರವನ್ನು ದಿನಾಂಕ: 08.11.2022ರಂದು ಸಲ್ಲಿಸುವ ಕುರಿತು.

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀಮತಿ ಸುನಿತಾ. ಬೆಸ್ಕಾಂ
3. ಶ್ರೀ ಮಹೇಶ್.ಎಂ. ವಿದ್ಯುತ್
4. ಶ್ರೀ ಶಿವಕುಮಾರಯ್ಯ, ಹಿ.ಆ.ಪ
5. ಶ್ರೀ ವೆಂಕಟೇಶ್ ಮೂರ್ತಿ, ಟಿ.ಐ.
6. ಶ್ರೀ ಅನಿಕೇಶ್, ಕಿ.ಆ.ಪ
7. ವಿಜಯಕುಮಾರ್, ಸದಸ್ಯರು.
8. ಶ್ರೀ ವೈ.ಜಿ. ಪದ್ಮರಾಜ್
9. ಶ್ರೀ ಆನಂದ್.ಹೆಚ್.ವಿ. ವಿದ್ಯುತ್
10. ಶ್ರೀ ಹುಚ್ಚಯ್ಯ
11. ಶ್ರೀ ಪ್ರದೀಪ್ ಕುಮಾರ್
12. ಶ್ರೀ ದರ್ಶನ್
13. ಶ್ರೀ ಮಹೇಶ್

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 143ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ 3ನೇ ಬ್ಲಾಕ್, ಮಂಜುನಾಥನಗರ, ಶಿವನಗರ, ಮಹಾಗಣಪತಿನಗರ ಹಾಗೂ 5ನೇ ಬ್ಲಾಕ್ ನಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಮ್ಯಾನ್ ಹೋಲ್ ಗಳಲ್ಲಿ ಮರದ ಬೇರುಗಳು ಮತ್ತು ಇತರ ತ್ಯಾಜ್ಯ ವಸ್ತುಗಳು ಸಂಗ್ರಹಗೊಂಡು ಒಳಚರ್ಂಡಿ ಪೈಪ್ ಗಳು ಬ್ಲಾಕ್ ಆಗಿ ಅಲ್ಲಲ್ಲಿ ಉಕ್ಕಿ ಹರಿಯುವುದನ್ನು ಸಾರ್ವಜನಿಕರು ಸಭೆಗೆ ತಿಳಿಸಿದಾಗ , ಬಿ.ಡಬ್ಲ್ಯೂ.ಎಸ್.ಎಸ್.ಬಿ.ಸಿಬ್ಬಂದಿ ಮತ್ತು ಅಭಿಯಂತರರು ಸಭೆಯಲ್ಲಿ ಹಾಜರಿದ್ದು, ಅಂತಹ ಪ್ರಕರಣವನ್ನು ತುರ್ತಾಗಿ ಕೆಲಸ ನಿರ್ವಹಿಸಿ, ಜನ ಸಾಮಾನ್ಯರಿಗೆ ಅನುಕೂಲ ಮಾಡಿಕೊಡಲು ಸಭೆಗೆ ತಿಳಿಸಿರುತ್ತಾರೆ. ಹಿಂದಿನ ಸಭೆಯಂತೆ ಈ ಮೇಲ್ಕಂಡ ಎಲ್ಲಾ ಕೆಲಸಗಳನ್ನು ಪರಿಪೂರ್ಣವಾಗಿ ನಿರ್ವಹಿಸಲಾಗಿರುತ್ತದೆ ಎಂದು ದಿನಾಂಕ: 05.11.2022ರ ಸಭೆಗೆ ಮಾಹಿತಿಯನ್ನು ಸಲ್ಲಿಸಿರುತ್ತಾರೆ. ಇನ್ನುಳಿದಂತೆ ಕೆಲಸವನ್ನು ಹಂತ ಹಂತವಾಗಿ ಸಾರ್ವಜನಿಕರ ದೂರಿನ ಮೇರೆಗೆ ಮಾಡಿಕೊಡಲಾಗುವುದು.

2. ನೋಡಲ್ ಅಧಿಕಾರಿಗಳು, ವಾರ್ಡಿನಲ್ಲಿ ಒಣಗಿರುವ ಮತ್ತು ಕಡಿದಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸುವಂತೆ ಸೂಚಿಸಿದರು. ಸಭೆಯಲಿದ್ದ ಸದಸ್ಯರು ಹಾಗೂ ನೋಡಲ್ ಅಧಿಕಾರಿಗಳು ರಸ್ತೆಯಲ್ಲಿ ಬಿದ್ದಿರುವ ಮರಗಳ ಕೊಂಬೆಗಳನ್ನು ತೆರವುಗೊಳಿಸಲು ವಿಳಂಭ ಮಾಡುತ್ತಿರುವ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರಿಗೆ ಅರಣ್ಯ ಇಲಾಖೆ ಅಧಿಕಾರಿಗಳಿಂದ ಕೆಲಸ ಪ್ರಗತಿಯಲ್ಲಿದ್ದು, ಇತ್ತೀಚಿನ ದಿನಗಳಲ್ಲಿ ಬಿದ್ದ ಭಾರಿ ಮಳೆಗಳಿಂದ ರಸ್ತೆಯ ಇಕ್ಕೆಲಗಳಲ್ಲಿ ಮರದ ಕೊಂಬೆಗಳು ಬಿದ್ದಿರುವುದನ್ನು ತುರ್ತಾಗಿ ಬೇರೆಡೆಗೆ ಸಾಗಿಸಲು ಕ್ರಮ ವಹಿಸಲಾಗಿರುತ್ತದೆ ಎಂದು ದಿನಾಂಕ: 05.11.2022ರ ಸಭೆಗೆ ಮಾಹಿತಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ತಿಮ್ಮಯ್ಯ ರಸ್ತೆ ಮತ್ತು ಮಂಜುನಾಥನಗರ ಮುಖ್ಯ ರಸ್ತೆಗಳಲ್ಲಿ ಕೆಲವು ಮರಗಳ ಕೊಂಬೆಗಳು ಒಣಗಿದ್ದು, ಮುಂಜಾಗ್ರತ ಕ್ರಮವಾಗಿ ಒಣಗಿರುವ ಮರದ ಕೊಂಬೆಗಳನ್ನು ತುರ್ತಾಗಿ ತೆರವು ಮಾಡಲು ಸಾರ್ವಜನಿಕರು ಮತ್ತು ಸದಸ್ಯರು ಸಭೆಯಲ್ಲಿ ಕೋರಿರುತ್ತಾರೆ. ಅದರಂತೆ ಹಂತ ಹಂತವಾಗಿ ತೆರವುಗೊಳಿಸಿ ಮುಂದಿನ ಸಭೆಗೆ ವರದಿ ಮಾಡುತ್ತೇನೆ ಎಂದು ಅರಣ್ಯಾಧಿಕಾರಿಗಳು ಸಭೆಗೆ ತಿಳಿಸಿರುತ್ತಾರೆ.

Scanned by CamScanner

3. ಸದರಿ ವಾರ್ಡ್ ಪ್ರದೇಶದಲ್ಲಿ ಈಗಾಗಲೇ ಗುಂಡಿಗಳನ್ನು ಮುಚ್ಚಲಾಗಿದ್ದು, ಇನ್ನುಳಿದ ಗುಂಡಿಗಳನ್ನು ಈಗಾಗಲೇ ದಿನಿನಿತ್ಯ ಜಲ್ಲಿ ಕಲ್ಲಿನ ಮಿಶ್ರಣ ಮತ್ತು ಕೆಲವು ಭಾಗಗಳಲ್ಲಿ ಡಾಂಬರ್ ಮಿಶ್ರಣದಿಂದ ಕೆಲವು ರಸ್ತೆ ಗುಂಡಿಗಳನ್ನು ಸಾರ್ವಜನಿಕರ ದೂರಿನ ಮೇರೆಗೆ ಹಾಗೂ ಸಂಚಾರಿ ಪೋಲಿಸ್ ರವರು ನಮೂದಿಸಿರುವ ಗುಂಡಿಗಳನ್ನು ಹಂತ ಹಂತವಾಗಿ ನಿರ್ವಹಿಸಲಾಗಿರುತ್ತದೆ.

8/4/22

ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 143

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

Scanned by CamScanner